

ಪ್ರದೇಶದಲ್ಲಿ ಚೀನಾ ಮತ್ತು ಪಾಕಿಸ್ತಾನದೊಡನೆ ಗಡಿ ಹಂಚಿಕೊಂಡಿರುವ ಭಾರತ, ಕಾರ್ಗಿಲ್ ಯುದ್ಧವನ್ನು ಕಂಡಿದೆ; ಚೀನಾದ ಗಡಿಯಲ್ಲಿ ಬಿಕ್ಕಟ್ಟು ಮುಂದುವರೆದಿದೆ. ಇಂತಹ ಸಮಯದಲ್ಲಿ 'ಸಮರಕ್ಕೆ ಸದಾ ಸಿದ್ಧ'ವಾದ, 5.8 ಟನ್ ತೂಕದ 'ಪ್ರಚಂಡ', ಸರಹದ್ದಿನ ರಕ್ಷಣೆಗೆ ಗಡಿಯಂಚಿನ ವಾಯುನೆಲೆಗೆ ಸಾಗಲಿದೆ.

ಭಾರತದ ಮೊಟ್ಟ ಮೊದಲ ದೇಶೀಯ ವಿನ್ಯಾಸದ ಮಿಲಿಟರಿ ಹೆಲಿಕಾಪ್ಟರ್, 'ಧ್ರುವ' (ಅಡ್ವಾನ್ಸ್ಡ್ ಲೈಟ್ ಹೆಲಿಕಾಪ್ಟರ್ – ಎ.ಎಲ್.ಎಚ್.). ಅಸ್ತ್ರಶಸ್ತ್ರಗಳನ್ನು ಪೇರಿಸಿಕೊಂಡು 'ರುದ್ರ' ಆದ ಧ್ರುವ ಹೆಲಿಕಾಪ್ಟರ್ ಅದಾಗಲೇ ನಮ್ಮ ಸೇನೆಯಲ್ಲಿ ಹಾರುತ್ತಿದೆ. 300ಕ್ಕೂ ಹೆಚ್ಚು 'ಧ್ರುವ' ಹೆಲಿಕಾಪ್ಟರ್‌ಗಳು ಭೂಸೇನೆ, ವಾಯುಸೇನೆ, ನೌಕಾಪಡೆ ಮತ್ತು ತಟರಕ್ಷಕ ದಳಗಳಲ್ಲಿ ಕಾರ್ಯನಿರತವಾಗಿವೆ.

ಸ್ವದೇಶಿ ಸಂಶೋಧನೆ ಮತ್ತು ವಿನ್ಯಾಸದ ಫಲವಾದ 'ಧ್ರುವ' (ಅತ್ಯಾಧುನಿಕ ಹಗುರ ಹೆಲಿಕಾಪ್ಟರ್) ಮತ್ತು 'ಪ್ರಚಂಡ' (ಹಗುರ ಯುದ್ಧದ ಹೆಲಿಕಾಪ್ಟರ್), ಎರಡೂ ಕನ್ನಡ ನೆಲದಲ್ಲಿ ವಿನ್ಯಾಸವಾಗಿ ನಿರ್ಮಾಣಗೊಂಡವು ಎಂಬುದು ಕನ್ನಡಿಗರ ಸಂಭ್ರಮ ಮತ್ತು ಸಂತಸಕ್ಕೆ ಕಾರಣವಾಗಿದೆ. ಕನ್ನಡ ನೆಲದಲ್ಲಿ ಸ್ಥಾಪಿತವಾದ ವಿಮಾನ ಕಾರ್ಖಾನೆಯ ಮೂಲಕ ವಾಯುಯಾನದ ಅದ್ಭುತ ಅಧ್ಯಾಯ ಭಾರತದಲ್ಲಿ ಆರಂಭವಾಗಿತ್ತು.

### ಆ ಸಂಜೆ...

1992ರ ಆ ಸಂಜೆ ನನಗೆ ನೆನಪಾಗುತ್ತದೆ. ದೇಶದ ಮೊಟ್ಟ ಮೊದಲ ಮಿಲಿಟರಿ ಹೆಲಿಕಾಪ್ಟರ್ ಎ.ಎಲ್.ಎಚ್. ನಮ್ಮ 'ಹೆಲಿಕಾಪ್ಟರ್ ಡಿಸೈನ್ ಬ್ಯೂರೋ'ದ ಹೆಲಿಪ್ಯಾಡ್‌ನಲ್ಲಿ ಮೊಟ್ಟ ಮೊದಲ ಬಾರಿಗೆ ನೆಲದಿಂದ

ಪರೀಕ್ಷಾರ್ಥ ಸಂಚಾರಕ್ಕಾಗಿ 'ಪ್ರಚಂಡ್'ನಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್




ಭಾರತೀಯ ವಾಯುಪಡೆಗೆ 'ಪ್ರಚಂಡ್' ಅನ್ನು ಔಪಚಾರಿಕವಾಗಿ ಪರಿಚಯಿಸುವ ಸಂದರ್ಭದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಸೇನಾ ಅಧಿಕಾರಿಗಳು.